ಸಿದ್ದಲಿಂಗ ಪಟ್ಟಣಶೆಟ್ಟಿ ಅವರ ಚೇಲ ಪದ್ಯವು ಮನುಷ್ಯನ ಜೀವನದ ಸಂಘರ್ಷವನ್ನು ಮತ್ತು ಯುವಕನಾಗಿ ಸಮಾಜದಲ್ಲಿ ಉದ್ಯೋಗ ಇತ್ಯಾದಿಗಳನ್ನು ಪೂರೈಸಿಕೊಳ್ಳಲು ಸಾಧ್ಯವಾಗದೆ ಬೆಳವಣಿಗೆ ಇಲ್ಲದ ಸ್ಥಗಿತ ಜೀವನವನ್ನು ಕುರಿತು ಚಿಂತಿಸಿದ್ದಾಗಿದೆ. ಕವಿತೆಯ ನಿರೂಪಕನು ಪ್ರಾರಂಭದಲ್ಲಿ ತಾನು ಸತ್ತಿರುವುದಾಗಿ ತಿಳಿಸುತ್ತಾ ಅಂದರೆ ಜಾಗತೀಕರಣದ ಈ ಸಂದರ್ಭದಲ್ಲಿ ಸಮಾಜದ, ದೇಶದ ಯಾವುದೇ ಪ್ರಗತಿಯನ್ನು ಕಾಣಲಾಗದೆ ಸಮಾಜವಾದ , ಸಮತಾವಾದ ಮುಂತಾದ ಇಸಂಗಳ ಬಗ್ಗೆ ಕನಸು ಕಂಡು ಅವುಗಳು ಸುಳ್ಳಾಗುತ್ತಿದೆ. ಹೀಗಾಗಿ ಇಂತಹ ದೇಶದಲ್ಲಿ ಬದುಕಿ ಮಾಡುವುದಾದರೂ ಏನು ಎಂದು ಪ್ರಶ್ನಿಸುತ್ತಾರೆ. ತನ್ನ ಬದುಕು ಇದ್ದು ಇಲ್ಲದಂತಾಗಿದೆ. ದೇಶದ ಜನಸಂಖ್ಯೆ ಹೆಚ್ಚಿರುವ ಕಾರಣ 33 ವರ್ಷ ವಯಸ್ಸಾಗಿರುವ ಕಾರಣ ತನಗೆ ಇಲ್ಲಿ ಬದುಕುವ ಹಕ್ಕು ರಾಷ್ಟ್ರೀಯ ಆರೋಗ್ಯ ಮಿತಿಗೆ ಅನುಸಾರ ಇಲ್ಲವೆಂದಿದ್ದಾರೆ.  ಮೂರು ನಾಲ್ಕು ಸಲ ಮಹಾ ಚುನಾವಣೆಗಳು ನಡೆದ ಸಂದರ್ಭದಲ್ಲಿ ಪ್ರಜಾಪ್ರಭುತ್ವದ ಆಶಯವನ್ನು ಮನಸ್ಸಿನಲ್ಲಿರಿಸಿಕೊಂಡು ವೋಟು ಚಲಾಯಿಸಿ ಬದಲಾವಣೆ,  ಪ್ರಗತಿ ಮುಂತಾದ ಕನಸು ಕಾಣುತ್ತಾ ಅವುಗಳು ಕೂಡ ವಿಫಲವಾಗಿ ತಾನು ಓಟು ಚಲಾಯಿಸಿದ ಕಾರಣ ಸಾರ್ಥಕತೆಯ ಇಲ್ಲದ ಕುರಿತು ಈಗ ಎದೆಸಡಿಸಿ ನಿಲ್ಲಲು ಸಾಧ್ಯವಾಗುತ್ತಿಲ್ಲ ಎಂದಿದ್ದಾರೆ ಸವಿದಿರುವ ಹಿಂಗಿದ ಕೆರೆಗಳು ಮುಂತಾಗಿ ಬರದ ಸ್ಥಿತಿಯಲ್ಲಿ ತಾನು ತೀರಿಸಬೇಕಾಗಿರುವ ಸಾಲದ ಬಾಕಿಗಳು ಹೀಗೆ ಸತತವಾಗಿ ವೈಫಲ್ಯದಿಂದ ನಿರಾಸೆ ಹೊಂದಿ,ಇವುಗಳಿಂದ ತನ್ನ ಬದುಕು ಕೊನೆಯದಂತೆ ಎಂದು ಹೇಳುತ್ತಾರೆ. ಪುಸ್ತಕ ಕೊಂಡು ಓದುತ್ತಿದ್ದ ಕೈಗಳೊಂದಿಗೆ ತರಕಾರಿಯನ್ನು ತರುತ್ತಾ, ಯೋಚನೆಗಳನ್ನು ಬದಿಗಿರಿಸಿ ಸರ್ಕಾರ ನೀಡುತ್ತಿರುವುದರಲ್ಲಿಯೇ ತೃಪ್ತಿ ಕಾಣುತ್ತಾ ಉಳಿದಿರುವ ತನಗೆ ಇನ್ನು ಬದುಕುವ ಆಸೆಯೇ ಉಳಿದಿಲ್ಲ ಎಂದು ಹೇಳುತ್ತಾರೆ. ತಾನು ಕೂಡ ಹಿಂದೆ ಅನೇಕ ಕನಸುಗಳನ್ನು ಹೊತ್ತು ಅದು ನನಸಾಗುವಂತೆ ಎರಡು ಬೆಳ್ಳಿ ಕಣ್ಣು ತನ್ನನ್ನು ಕಂಡು ಮಿಂಚಿದ್ದು ಅದರ ಸಂಭ್ರಮದಿಂದ ಆತನ ಉಸಿರು ಗಂಧದಷ್ಟು ಅಮೃತಮಯವಾದದ್ದು ಇವೆಲ್ಲ ಬರೀ ನೆನಪಾಗಿ ಉಳಿದ ಸಂಗತಿಗಳಷ್ಟೇ ಎಂದು ಹೇಳುತ್ತಾ ಇಂದು ತನಗೆ ಬದುಕುವ ಹಕ್ಕು ಉಳಿದಿಲ್ಲವೆಂದು ಬೇಸರಿಸಿಕೊಳ್ಳುತ್ತಾರೆ.